**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 23 ಪ್ರಾ.ಸಾ. : 18**

ಸಾಕ್ಷಿಯ ಹೆಸರು : ದೀಪಾ
ತಂದೆಯ ಹೆಸರು : ಗಣಪತಿ ನಾಯಕ
ವಯಸ್ಸು : 43 ವರ್ಷ
ಉದ್ಯೋಗ : ವ್ಯವಸ್ಥಾಪಕರು , ಶಾಂತಿಕಾ ಸೌಹಾರ್ದ ಸಹಕಾರಿ ಸಂಘ, ಅಂಕೋಲಾ
ವಾಸ : ಅಂಕೋಲಾ

**ದಿನಾಂಕಃ 08-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಕಳೆದ 20 ವರ್ಷಗಳಿಂದ ಅಂಕೋಲಾದ ಶಾಂತಿಕಾ ಸೌಹಾರ್ದ ಸಹಕಾರಿ ಸಂಘದಲ್ಲಿ ವ್ಯವಸ್ಥಾಪಕಳಾಗಿ ಕೆಲಸ ನಿರ್ವಹಿಸುತ್ತಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಸಂಘದ ಬ್ಯಾಂಕಿನ ಗ್ರಾಹಕರು ಆಗಿರುತ್ತಾರೆ. ಆರೋಪಿ ಹೆಸರು ನರೇಂದ್ರ ಹಿತ್ತಲಮಕ್ಕಿ . ಈ ಪ್ರಕರಣದಲ್ಲಿ ಲೋಕಾಯುಕ್ತ ಪೊಲೀಸ್ ನವರು ಆರೋಪಿ ಮತ್ತು ಅವನ ಕುಟುಂಬದ ಸದಸ್ಯರಿಗೆ ಸಂಬಂಧಪಟ್ಟ ನಮ್ಮ ಬ್ಯಾಂಕಿನಲ್ಲಿ ಇರುವ ಎಲ್ಲಾ ಖಾತೆಗಳ ವಿವರವನ್ನು ಕೋರಿದ್ದರು. ಈಗ ಲೋಕಾಯುಕ್ತ ಪೊಲೀಸ್ ನವರು ಬರೆದಿದ್ದ ಪತ್ರ ನೋಡಿರುತ್ತೇನೆ. ಅದು ನೆರಳಚ್ಚು ಪ್ರತಿಯಾಗಿರುವುದರಿಂದ ನಿಶಾನೆ ಮಾಡಿರುವುದಿಲ್ಲ. ನಾನು ನಮ್ಮ ಸಂಘದ ಬ್ಯಾಂಕಿನ ಕಡತಗಳನ್ನು ಪರಿಶೀಲಿಸಲಾಗಿ ಆರೋಪಿಗೆ ಸಂಬಂಧಪಟ್ಟಂತೆ ಆರೋಪಿಯ ಹೆಂಡತಿ ಶ್ರೀಮತಿ ಕಲಾ ಎನ್ . ಹಿತ್ತಲಮಕ್ಕಿರವರ ರೂ. 10,000/- cash certificate ಅನ್ನು ದಿನಾಂಕ 26.10.2001 ರಂದು ಪಡೆದಿರುವುದು ಅದು ಆಗ ಇನ್ನೂ ಚಾಲ್ತಿಯಲ್ಲಿ ಇದ್ದದ್ದು ಕಂಡು ಬಂತು. ಅದೇ ರೀತಿ ಆರೋಪಿಯ ಮಗ ಶ್ರೀ ವೇದಾಂತ ನರೇಂದ್ರ ಹಿತ್ತಲಮಕ್ಕಿ ದಿನಾಂಕ 18.02.2009 ರಲ್ಲಿ ರೆಸಾರ್ಟ್ ವ್ಯವಹಾರ ಮಾಡುವುದಕ್ಕಾಗಿ ರೂ. 25,00,000/- ಸಾಲ ಪಡೆದಿದ್ದದ್ದು ಆ ಪೈಕಿ ರೂ. 10,64,681/- ಬಾಕಿ ಇದ್ದದ್ದು ಕಂಡು ಬಂತು. ಆ ಬಗ್ಗೆ ನಾನು ಕರ್ನಾಟಕ ಲೋಕಾಯುಕ್ತ ಮೈಸೂರು ಆರಕ್ಷಕ ಅಧೀಕ್ಷಕರಿಗೆ ದಿನಾಂಕ 07.05.2010 ರಂದು ಪತ್ರದ ಮೂಲಕ ಮಾಹಿತಿ ಕೊಟ್ಟಿರುತ್ತೇನೆ ಹಾಗೂ ಅದರ ಜೊತೆ ಕಲಾ ಎನ್. ಹಿತ್ತಲಮಕ್ಕಿ ಹೆಸರಿಗೆ ಇದ್ದ ದಾಖಲಾತಿ ನಕಲನ್ನು ಕೊಟ್ಟಿದ್ದೇನೆ. ಈಗ ನಾನು ನೀಡಿರುವ ಪತ್ರ

ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ . ಆಗ ನಾನು ಪ್ರಭಾರ ವ್ಯವಸ್ಥಾಪಕಳು ಆಗಿದ್ದೆ. ಆ ದಾಖಲಾತಿಯನ್ನು ನಿ.ಪಿ. 184 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿಯ ರುಜುವನ್ನು ನಿ.ಪಿ. 184(ಎ) ಎಂದು ಗುರುತಿಸಲಾಯಿತು. ಅದರೊಂದಿಗೆ ಇರುವ ದಾಖಲಾತಿ ನೆರಳಚ್ಚು ಪ್ರತಿಯಾಗಿದೆ .

2. ದಿನಾಂಕ 16.02.2012 ರಂದು ಕಾರವಾರದ ಕರ್ನಾಟಕ ಲೋಕಾಯುಕ್ತ ಆರಕ್ಷಕ ನಿರೀಕ್ಷಕರಿಗೆ ಅವರ ಪತ್ರದ ಮೇರೆಗೆ ಶ್ರೀ ವೇದಾಂತ ಎನ್ . ಹಿತ್ತಲಮಕ್ಕಿ ಹೆಸರಿಗೆ ರೂ. 1,00,000/- ನಿಗದಿತ ಠೇವಣಿ ನಮ್ಮ ಸಂಘದ ಬ್ಯಾಂಕ್ ನಲ್ಲಿ ಇದ್ದ ಬಗ್ಗೆ ಪತ್ರ ಮುಖೇನ ಮಾಹಿತಿ ನೀಡಿರುತ್ತೇನೆ. ಅದರೊಂದಿಗೆ ಮುದ್ದತಿ ಠೇವು ಖಾತೆ ನಕಲನ್ನು ಲಗತ್ತಿಸಿರುತ್ತೇನೆ. ಈಗ ಆ ಪತ್ರವನ್ನು ನೋಡಿರುತ್ತೇನೆ. ಆ ಪತ್ರವನ್ನು ನಿ.ಪಿ. 185 ಎಂದು ಗುರುತಿಸಲಾಯಿತು. ಆ ಪತ್ರದಲ್ಲಿ ಆಗ ನಮ್ಮ ಸಂಘದ ವ್ಯವಸ್ಥಾಪಕರಾಗಿದ್ದ ದೀಪಾ ಕೆ. ತೋರ್ಕೆರವರ ರುಜು ಇದೆ . ಅವರ ರುಜುವನ್ನು ನಾನು ಗುರುತಿಸುತ್ತೇನೆ. ಸದರಿ ರುಜುವನ್ನು ನಿ.ಪಿ. 185(ಎ) ಎಂದು ಗುರುತಿಸಲಾಯಿತು. ದಿನಾಂಕ 06.11.2007 ರಂದು ಸದರಿ ಹಣವನ್ನು ನಮ್ಮ ಸಂಘದಲ್ಲಿ ಠೇವಣಿ ಇಡಲಾಗಿತ್ತು .

3. ಕಾರವಾರದ ಲೋಕಾಯುಕ್ತ ಕಚೇರಿಯ ಆರಕ್ಷಕ ನಿರೀಕ್ಷಕರಿಂದ ದಿನಾಂಕ 29.11.2010 ರಂದು ಮತ್ತೊಂದು ಪತ್ರ ಬಂದಿತ್ತು . ಅದರಲ್ಲಿ ವೇದಾಂತ ಎನ್. ಹಿತ್ತಲಮಕ್ಕಿ ಪಡೆದ ಸಾಲದ ಬಗ್ಗೆ ದಾಖಲಾತಿಗಳನ್ನು ಒದಗಿಸುವಂತೆ ಕೇಳಿದ್ದರು. ಈಗ ಆ ಪತ್ರ ನೋಡಿರುತ್ತೇನೆ. ಆ ಪತ್ರವನ್ನು ನಿ.ಪಿ. 186 ಎಂದು ಗುರುತಿಸಲಾಯಿತು. ನಾನು ಆ ಬಗ್ಗೆ ನೆರಳಚ್ಚು ಪ್ರತಿಯ ದಾಖಲಾತಿಗಳನ್ನು ಕೊಟ್ಟಿದ್ದೇನೆ. (ಈ ಹಂತದಲ್ಲಿ ಸಾಕ್ಷಿಗೆ ಮೇಲ್ಕಂಡ ಎಲ್ಲಾ ದಾಖಲಾತಿಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸುವಂತೆ ನಿರ್ದೇಶಿಸಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಗಿದೆ ).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ